**ದಿನಾಂಕಃ30.07.2024 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ–**

2 ನೇ ಪ್ರತಿವಾದಿ ತೆರಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಅವರಿಗೆ ಸ್ವಂತ ಮನೆಗಳು ಇರುತ್ತವೆ ಎಂದರೆ ಸರಿ. ಅದರಿಂದ ಬಾಡಿಗೆ ಪಡೆಯುತ್ತಾರೆ ಎಂದರೆ ಸರಿ. 1 ಮತ್ತು 4 ನೇ ಪ್ರತಿವಾದಿ ತಮ್ಮ ತಕರಾರು ಪತ್ರದಲ್ಲಿ ದಿನಾಂಕಃ23.11.2009 ರಂದು ಎಲ್ಲಾ ಪ್ರತಿವಾದಿಯರು ಸೇರಿ ದಾವಾ ಆಸ್ತಿಯನ್ನು ವಾದಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎನ್ನುವ ವಿಷಯವನ್ನು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕರಾರು ಪತ್ರದ ಸಮಯದಲ್ಲಿಯೇ ಕ್ರಯದ ಒಟ್ಟು ಮೊತ್ತ ರೂ.2,31,000/– ಹಣವನ್ನೂ ಸಹ ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡಿರುತ್ತೇವೆ ಎಂದು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಹಣ ಪಡೆದ ನಂತರ ಕರಾರು ಪತ್ರಕ್ಕೆ ನಾವೆಲ್ಲರೂ ಒಪ್ಪಿಗೆಯಿಂದ ಸಹಿ ಮಾಡಿರುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಗೈರು ಹಾಜರು ಇದ್ದರೂ ಸಹ ಅವರ ಒಪ್ಪಿಗೆಯಿಂದಲೇ ದಾವಾ ಆಸ್ತಿಯನ್ನು ವಾದಿಗೆ ನೀಡಿರುತ್ತೇವೆ ಎಂದು ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಮೊದಲು ಸರ್ವೆ ನಂಬರ್ಃ134 ಇದ್ದು ಈಗ ಸರ್ವೆ ನಂಬರ್ಃ134/2 ಎಂದು ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಸ್ವಾಧೀನವನ್ನು ಕರಾರು ಪತ್ರ ಆದ ದಿನವೇ ವಾದಿಗೆ ಬಿಟ್ಟುಕೊಟ್ಟಿರುತ್ತೇವೆ ಎಂದು ತಕರಾರು ಪತ್ರದಲ್ಲಿ ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ ಮುಂದಿನ ದಿನಗಳಲ್ಲಿ ಕ್ರಯಪತ್ರ ಬರೆದುಕೊಡಲೂ ಸಹ ನಾವು ಬದ್ಧರಾಗಿರುತ್ತೇವೆ ಎಂಬ ಅಂಶವನ್ನು ಸಹ ತಕರಾರು ಪತ್ರದಲ್ಲಿ ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ ತಕರಾರು ಪತ್ರದಲ್ಲಿ 1 ಮತ್ತು 4 ನೇ ಪ್ರತಿವಾದಿಯರು ವಾದಿಯ ದಾವೆಯನ್ನು ಡಿಕ್ರಿ ಮಾಡಲು ತಮಗೆ ಯಾವುದೇ ತೊಂದರೆ ಇಲ್ಲ ಎಂದು ತಕರಾರು ಪತ್ರದಲ್ಲಿ ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ

ದಿನಾಂಕಃ23.11.2009 ರಿಂದಲೇ ವಾದಿ ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನ ವಾದಿ ಬಳಿ ಇರುವ ಕಾರಣ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1, 2 ಮತ್ತು 4 ನೇ ಪ್ರತಿವಾದಿಯರು ವಾದಿಗೆ ಕ್ರಯಪತ್ರ ಬರೆದುಕೊಡಲು ತಯಾರಿದ್ದು ನಾನು ಮಾತ್ರ ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ ವಾದಿ ಯಾವತ್ತೂ ಸಹ ಕ್ರಯಪತ್ರ ಬರೆಯಿಸಿಕೊಳ್ಳಲು ಸಿದ್ಧರಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳುವ ಪ್ರಕಾರ ನನ್ನ ಮತ್ತು ನನ್ನ ಅಣ್ಣ–ತಮ್ಮಂದಿರ ನಡುವೆ ಪಾಲುವಿಭಾಗ ಆಗಿರುವುದೇ ಇಲ್ಲ ಎಂದರೆ ಸರಿಯಲ್ಲ.

ಲಲಿತಮ್ಮ ನನ್ನ ತಂಗಿ. ಲಲಿತಮ್ಮ ಜಂಟೀ ಕುಟುಂಬದಲ್ಲಿ ಪಾಲು ಬೇಕು ಎಂದು ನಮ್ಮೆಲ್ಲರ ಮೇಲೆ ಈ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಮೇಲೆ ಸ್ವಾಧೀನ ಇಲ್ಲದಿದ್ದರೂ ಸಹ ವಾದಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ತಕರಾರು ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.